ದಿಃ 08.11.2019. ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟಿ ಸವಾಲುಃ ಶ್ರೀ ಎಸ್ ಕೆ ವಕೀಲರಿಂದ ,

24. ಅರ್ಜಿದಾರರು ಬಸ್ ಏಜೆಂಟ್ ಆಗಿದ್ದಾರೆ. ಅರ್ಜಿದಾರರು ನನ್ನ ಹೆಸರಿನಲ್ಲಿ ಎಷ್ಟು ಬಸ್ ಓಡಿಸುತ್ತಿದ್ದರು ಎಂದು ಮಾಹಿತಿ ಇಲ್ಲ. ಬಸ್ ಏಜೆಂಟರಿಗೂ ಬಸ್ ಮಾಲೀಕರಿಗೂ ಇರುವ ವ್ಯತ್ಯಾಸ ಗೊತ್ತಿಲ್ಲ. ನಾನು ನನ್ನ ಹೆಸರಿಗೆ ಇರುವ ಬಸ್ ನಂಃ ಕೆ ಎ 14-4747 , ಕೆ ಎ 14-8989, ಕೆ ಎ 14-3939 ಇವುಗಳನ್ನು ಮಾರಾಟ ಮಾಡಿರುತ್ತೇನೆ ಮತ್ತು ಇದರಿಂದ ಬಂದ ಹಣವನ್ನು ನಾನು ಪಡೆದಿರುತ್ತೇನೆ ಎಂದರೆ ನನಗೆ ಈ ಕುರಿತಂತೆ ಮಾಹಿತಿ ಇಲ್ಲ . ನನ್ನ ಹೆಸರಿನಲ್ಲಿ ಬಸ್ ಓಡಿಸಲು ರೂಟ್ ಪರ್ಮಿಟ್ ಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ರೂಟ್ ಪರ್ಮಿಟ್ ಗಳನ್ನು ಬಾಡಿಗೆ ಕೊಟ್ಟು ನಾನು ಅದರಿಂದ ಹಣ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಹೆಸರಿಗೆ ಚೆನ್ನಗಿರಿಯಲ್ಲಿ ನಿವೇಶನ ಖರೀದಿಸಿದ್ದರು ಎಂದರೆ ಸರಿಯಲ್ಲ. ನಾನು ಅದನ್ನು ಕೂಡಾ ಮಾರಾಟ ಮಾಡಿರುತ್ತೇನೆಂದರೆ ಸರಿಯಲ್ಲ.

25. ನನ್ನ ಹಿಸ್ಸೆಯನ್ನು ಕೊಡಲು ಯಾರೂ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಕುಟುಂಬದಿಂದ ಹೆಚ್ಚಿನ ಅನುಕೂಲಗಳನ್ನು ಮತ್ತು ಆಸ್ತಿಗಳನ್ನು ಪಡೆದಿದ್ದರೂ ಕೂಡಾ ಈಗ ಈ ಅರ್ಜಿಯಲ್ಲಿಯ ಉಳಿದ ಪಕ್ಷಗಾರರು ಆಸ್ತಿಗಳಲ್ಲಿ ತಮ್ಮ ಹಿಸ್ಸೆ ಪಡೆಯುವುದಕ್ಕೆ ನಾನು ಅನವಶ್ಯಕ ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮಾಹಿತಿ ಇದೆ. ನನ್ನ ತಂದೆ 1987 ರಲ್ಲಿ ತೀರಿಕೊಂಡಿರಬಹುದು , ನನಗೆ ನೆನಪಿಲ್ಲ. ಆಸ್ತಿಗಳಲ್ಲಿ ನನಗೆ ಸಮಭಾಗ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ ನನ್ನ ಹೆಸರಿಗೆ ಮೃತ್ಯ ಪತ್ರ ಬರೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂತಹ ಯಾವುದೇ ಮೃತ್ಯ ಪತ್ರ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನಾನು ಹೇಳುವಂತಹ ಮೃತ್ಯ ಪತ್ರ ಬರೆಯುವ ಯಾವುದೇ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಅಂತಹ ದಾಖಲೆಯನ್ನು ಸೃಷ್ಟಿಸಿದ್ದೇನೆ

ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹಿಸ್ಸೆಗಳ ಕುರಿತು ಹೇಳಿದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಮತ್ತು ಉಳಿದ ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ.

***(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ 08.11.2019 ರಂದು ಬೆರಳಚ್ಚು ಮಾಡಲಾಯಿತು)***

***ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,***
***ಭದ್ರಾವತಿ.***